**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 19-07-2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿ ನಂ.8 ರವರ ಪರ ವಕೀಲರಿಂದ :**

**1)** ನನ್ನ ಪಾಟೀ ಸವಾಲಿನ 3 ನೇ ಪ್ಯಾರಾದಲ್ಲಿ ಹೇಳಿರುವ ದಾವೆಗಳ ತೀರ್ಪುಗಳ ಮೇಲೆ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ. ಕಾಳಮ್ಮ ರವರಿಗೆ ನ್ಯಾಯಾಲಯದ ಎದುರು ಹಣ ಪಾವತಿ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಲು ಯಾವುದೇ ತೊಂದರೆ ಇಲ್ಲ. ನಾನು ಯಾವುದೇ ಹಣವನ್ನು ಕಾಳಮ್ಮ ರವರಿಗೆ ನೀಡಿರುವುದಿಲ್ಲ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**2)** 1985 ರಲ್ಲಿ ಕಾಳಮ್ಮ ರವರಿಗೆ ಕರಾರು ಪತ್ರ ಮಾಡಿಕೊಟ್ಟಾಗ ಸ್ವಾಧೀನವನ್ನು ನಾನು ಅವರಿಗೆ ಹಸ್ತಾಂತರಿಸಿದ್ದು ಇಂದಿಗೂ ಅವರೇ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ವಕೀಲರಾದ ಭೈರೇಗೌಡ ರವರು ಸೇರಿ ಕಾಳಮ್ಮ ರವರು ಮರಣ ಹೊಂದಿದ ನಂತರ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಅಲ್ಲ ಹಾಗೂ ನಾನು ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಕ್ರಯಪತ್ರ ಮಾಡಿಕೊಡುವಂತೆ ಕೇಳಿದಾಗ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಕೇವಲ 8 ನೇ ಪ್ರತಿವಾದಿಗೆ ತೊಂದರೆ ಮಾಡಲು ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

3) **ಮರು ವಿಚಾರಣೆ ಇಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**